# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1021** |
| **ಸದಸ್ಯರ ಹೆಸರು** | : | **ಡಾ.ಚಂದ್ರಶೇಖರ.ಬಿ.ಪಾಟೀಲ್ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **18.12.2024** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

| **ಕ್ರ. ಸಂ.** | **ಪ್ರಶ್ನೆ** | **ಉತ್ತರ** |
|---|---|---|
| ಅ | ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಹಟ್ಟಿ ಪಟ್ಟಣದಲ್ಲಿ ಹೈನುಗಾರಿಕೆ ಅಭಿವೃದ್ಧಿಯಾಗದೆ ಸುತ್ತಲಿನ ಹತ್ತಾರು ಗ್ರಾಮ ಪಂಚಾಯಿತಿ ರೈತರು ಹೈನುಗಾರಿಕೆಯ ಮಾಹಿತಿ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಟ್ಟಿ ಪಟ್ಟಣದಲ್ಲಿ 20ನೇ ಜಾನುವಾರು ಗಣತಿಯ ಪ್ರಕಾರ ದನ-774, ಎಮ್ಮೆ-270, ಕುರಿ-580, ಮೇಕೆ-2217, ಹಂದಿ-1445, ನಾಯಿ-175, ಕೋಳಿ-1200. ಹಟ್ಟಿ ಪಟ್ಟಣವು ಗೆಜ್ಜಲಗಟ್ಟ ಪಶುಚಿಕಿತ್ಸಾಲಯ ವ್ಯಾಪ್ತಿಗೆ ಒಳಪಡುತ್ತಿದ್ದು, ಸುತ್ತಮುತ್ತಲಿನ ಒಟ್ಟು ಗ್ರಾಮಗಳಲ್ಲಿ ಪಶುಚಿಕಿತ್ಸಾಲಯದಿಂದ ಪ್ರಸಕ್ತ ಸಾಲಿನಲ್ಲಿ ಒಟ್ಟು ಕೃತಕ ಗರ್ಭಧಾರಣೆ-253, ಪ್ರಸಕ್ತ ಸಾಲಿನಲ್ಲಿ ಒಟ್ಟು ಗರ್ಭತಪಾಸಣೆ -171, ಕಾಲು ಬಾಯಿ ಲಸಿಕೆ ಒಟ್ಟು-6953, ಕರಳುಬೇನೆ ಲಸಿಕೆ ಒಟ್ಟು-5376, ಕಂದುರೋಗದ ಲಸಿಕೆ ಒಟ್ಟು-140, ಚರ್ಮಗಂಟು ರೋಗ ಲಸಿಕೆ ಒಟ್ಟು-2905, ರೇಬೀಸ್ ಲಸಿಕೆ ಒಟ್ಟು-200, ಪಿ.ಪಿ.ಆರ್ ಲಸಿಕೆ ಒಟ್ಟು-5383 ಹಾಕಲಾಗಿದೆ.<br><br>ಇಲಾಖಾವತಿಯಿಂದ ಗ್ರಾಮಗಳಲ್ಲಿ ಕಾಲ ಕಾಲಕ್ಕೆ ಗ್ರಾಮ ಸಂದರ್ಶನ ಹಾಗೂ ಗ್ರಾಮಸಭೆ ಮುಖಾಂತರ ಹಟ್ಟಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಪಶುಸಂಗೋಪನೆ ಹಾಗೂ ಹೈನುಗಾರಿಕೆ ಸಂಬಂಧ ಪಶುಚಿಕಿತ್ಸಾಲಯದ ಮುಖಾಂತರ ಹೈನುಗಾರಿಕೆ ಪ್ರೋತ್ಸಾಹ ನೀಡಲಾಗುತ್ತಿದೆ.<br><br>ಪಶುವೈದ್ಯ ಕೇಂದ್ರದಲ್ಲಿ ಬರಡು ರಾಸು ಚಿಕಿತ್ಸಾ ಶಿಬಿರ,ಲಸಿಕಾ ಕಾರ್ಯಕ್ರಮ ಮತ್ತು ಜಂತು ನಾಶಕ ಔಷಧಿ ಸರಬರಾಜು ಅದಲ್ಲದೆ ವೈಜ್ಞಾನಿಕ ಶಿಬಿರಗಳನ್ನು ಹಮ್ಮಿಕೊಂಡಿದ್ದು, ಪ್ರಸ್ತುತ ಸಾಲಿನಲ್ಲಿಯು ಸಹ ಹೈನುಗಾರಿಕೆ ಉತ್ತೇಜನ ನೀಡುವ ಜಾನುವಾರು ಆರೋಗ್ಯ ಸಂರಕ್ಷಣೆ ಕಾರ್ಯಕ್ರಮಗಳನ್ನು ಮತ್ತು ವಿಸ್ತರಣಾ ಚಟುವಟಿಕೆಗಳಾದ ಬರಡು ರಾಸು ಚಿಕಿತ್ಸಾ ಶಿಬಿರ ಮತ್ತು ವೈಜ್ಞಾನಿಕ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದಾಗಿ ರೈತರಿಗೆ ಹೈನುಗಾರಿಕೆ ಮಾಹಿತಿ ಕೊರತೆ ಕಂಡು ಬಂದಿರುವುದಿಲ್ಲ. |
| ಆ | ಬಂದಿದ್ದಲ್ಲಿ, ಪಶು ಆಸ್ಪತ್ರೆ ಕಾರ್ಯ ಯಾವಾಗ ಆರಂಭಗೊಳ್ಳುವುದು; ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳಾವುವು? | 2024-25ನೇ ಸಾಲಿನಲ್ಲಿ ನೂತನ ಪಶುಚಿಕಿತ್ಸಾಲಯಗಳನ್ನು ತೆರೆಯುವ ಸಂಬಂಧ ಹಟ್ಟಿಪಟ್ಟಣದ ಪ್ರಸ್ತಾವೆಯು ಸೇರಿದಂತೆ ಒಟ್ಟು 601 ಪ್ರಸ್ತಾವಗಳು ಸರ್ಕಾರದ ಪರಿಶೀಲನೆಯಲ್ಲಿವೆ. |

**ಇ- ಪಸಂಮೀ 320 ಸಲೆವಿ 2024**

ಕೆ. ವೆಂಕಟೇಶ್

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು